'ಮುಂಜಾವು' ಚಂದಾ ದರ
ಆಜೀವ ಚಂದಾ ೨೦೦ ರೂ
ವಾರ್ಷಿಕ ಚಂದಾ ೨೦ ರೂ.
ಬಿಡಿ ಪ್ರತಿ ೪೦ ಪೈಸೆ
ಜಾಹೀರಾತು ದರ
(ಕಾಲಂ ಸೆಂ. ಮೀ.ಗೆ)
ಮುಖಪುಟದಲ್ಲಿ: ೫ ರೂ.
ಇತರ ಪುಟಗಳಲ್ಲಿ: ೪ ರೂ.

ಮುಂಜಾವು

ವಾರಪತ್ರಿಕೆ.
ಸಂಪಾದಕ: ಸಿರಿಮನೆ ನಾಗರಾಜ್
ರಿಜಿಸ್ಟರ್ಡ್ ನಂ. ಕೆಆರ್ ಎನ್ ಎಸ್ — ೧೯

ಓದುಗರಲ್ಲಿ
ಜುಲೈ ೩ ರಿಂದ ೧೦ರ ತಾರೀಕಿನವರೆಗೆ ಮುದ್ರಣಾಲಯಕ್ಕೆ ರಜವು. ಆದ್ದರಿಂದ ೧೦-೭-೮೩ ರ 'ಮುಂಜಾವು' ಪ್ರಕಟವಾಗುವುದಿಲ್ಲ. ಎಂದಿನಂತೆ ಸಹಕರಿಸುತ್ತೀರಲ್ಲವೆ?
—ಸಂ.

ಸಂಪುಟ ೧ ಸಂಚಿಕೆ ೪೫ ಭಾನುವಾರ ೩-೭-೧೯೮೩ ಕೊಪ್ಪ ಬೆಲೆ ೨೦ ಪೈಸೆ

ಶರಾಬು ಬೆಲೆ ಇಳಿಸಲು
ಶೃಂಗೇರಿ ತಾ|| ರೈತಸಂಘದ ಒತ್ತಾಯ

ಶೃಂಗೇರಿ: ಶರಾಬು ಕಂಟ್ರಾಕ್ಟರುಗಳು ಶರಾಬು ದರ ಏರಿಸುವುದನ್ನು ತೀವ್ರವಾಗಿ ವಿರೋಧಿಸಿರುವ ತಾ|| ರೈತಸಂಘ, ದರವನ್ನು ಲೀಟರಿಗೆ ೨೦ ರೂ. ಗಳಿಗೆ ಇಳಿಸುವಂತೆ ಒತ್ತಾಯಿಸಿದೆ. ಅಲ್ಲದೆ, ರಹದಾರಿ ಇಲ್ಲದೆ ನಡೆಸುತ್ತಿರುವ ಶರಾಬು ಅಂಗಡಿಗಳನ್ನು ಮುಚ್ಚುವಂತೆಯೂ, ಜನತಾ ಕಾಲೋನಿಗಳೊಳಗೆ ಅಥವಾ ಊರಿನೊಳಗೆ ಇರುವ ಶರಾಬು ಅಂಗಡಿಗಳನ್ನು ಊರ ಹೊರಕ್ಕೆ ಸ್ಥಳಾಂತರಿಸುವಂತೆಯೂ ಒತ್ತಾಯಿಸಿದೆ.

ಸಾಗುವಳಿ ಚೀಟಿ

ಅನಾದಿಯಿಂದ ಮನೆ ಕಟ್ಟಿಕೊಂಡಿದ್ದು ಸಾಗುವಳಿ ಚೀಟಿ ಪಡೆಯದಿರುವವರಿಗೆ ಆ ಸ್ಥಳವನ್ನು ಮಂಜೂರು ಮಾಡಬೇಕು, ಕೂಡಲೇ ರೈತರಿಗೆ ಫಸಲು ಸಾಲ ನೀಡಬೇಕು, ಕಳೆದ ಬೇಸಿಗೆಯಲ್ಲಿ ಬಿಸಿಲಿನ ಝಳ ಮತ್ತು ಮಳೆ ಅಭಾವದಿಂದ ಅಡಿಕೆ ತೋಟಗಳು ಸುಟ್ಟು ಹೋಗಿರುವುದಕ್ಕೆ ಸರ್ಕಾರ ಸೂಕ್ತ ಪರಿಹಾರ ನೀಡಬೇಕು ಎಂದು ಒತ್ತಾಯಿಸುವ ನಿರ್ಣಯಗಳನ್ನು ರೈತಸಂಘ ಅಂಗೀಕರಿಸಿದೆ.

ಜೂನ್ ೨೬ ರಂದು ನಡೆದ ಈ ಸಭೆಯ ಅಧ್ಯಕ್ಷತೆಯನ್ನು ಶ್ರೀಕಂಠಗೌಡ ವಹಿಸಿದ್ದರು.

ಹೋಬಳಿ ಕಚೇರಿಗಳಲ್ಲಿ
ದಸ್ತಾವೇಜು ವಿಲೇವಾರಿಗೆ ಕ್ರಮ

ಸಾರ್ವಜನಿಕರ ಹಿತ ದೃಷ್ಟಿಯಿಂದ ಕೊಪ್ಪ ತಾಲೂಕು ತಹಸೀಲ್ದಾರ್ ಹಾಗೂ ಸಿಬ್ಬಂದಿ ವರ್ಗದವರು ಹೋಬಳಿ ಕಚೇರಿಗಳಲ್ಲಿ ಈ ಕೆಳಕಂಡ ದಿನಗಳಂದು ಸಾರ್ವಜನಿಕರ ಸಂದರ್ಶನಕ್ಕೆ ಅವಕಾಶ ಕಲ್ಪಿಸಿದ್ದಾರೆ. ಆಯಾ ದಿನಗಳಂದು ಆಯಾ ಹೋಬಳಿಗೆ ಸಂಬಂಧಪಟ್ಟಂತೆ ದಸ್ತಾವೇಜುಗಳ ವಿಲೇವಾರಿಗೆ ಕ್ರಮ ಕೈಗೊಳ್ಳಲಾಗುವುದು. ಸಾರ್ವಜನಿಕರು ಸಹಕರಿಸಬೇಕಾಗಿ ತಹಸೀಲ್ದಾರ್ ಕೋರಿದ್ದಾರೆ.

ಪ್ರತಿ ಸೋಮವಾರ: ಕಸಬಾ ಹೋಬಳಿ —ತಾಲೂಕು ಕಛೇರಿ, ಕೊಪ್ಪ;
ಮಂಗಳವಾರ: ಹರಿಹರಪುರ ಹೋಬಳಿ— ಪಂಚಾಯ್ತಿ ಕಛೇರಿ, ಹರಿಹರಪುರ;
ಗುರುವಾರ: ಮೇಗುಂದಾ ಹೋಬಳಿ— ಪಂಚಾಯ್ತಿ ಕಛೇರಿ, ಜಯಪುರ.

ದೇವಯ್ಯ ಹರವೆಗೆ ಶ್ರದ್ಧಾಂಜಲಿ

ಚಿಕ್ಕಮಗಳೂರು: ಮೈಸೂರಿನಲ್ಲಿ ಜೂನ್ ೧೮ ರಂದು ಹೃದಯಾಘಾತದಿಂದ ನಿಧನರಾದ ಯುವಕ ದಲಿತ ಸಾಹಿತಿ ದೇವಯ್ಯ ಹರವೆಯವರಿಗೆ ಶ್ರದ್ಧಾಂಜಲಿ ಅರ್ಪಿಸುವ ಸಭೆಯನ್ನು ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಜಿಲ್ಲಾಶಾಖೆ ಜೂನ್ ೨೫ ರಂದು ಇಲ್ಲಿ ಏರ್ಪಡಿಸಿತ್ತು. ಅಧ್ಯಕ್ಷತೆ ವಹಿಸಿದ್ದ ರಾಜ್ಯ ಸಂಚಾಲಕ ಎರಿ. ಡಿ. ಗಂಗಯ್ಯ, ದಲಿತ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದ ಹರವೆಯವರ ಹಠಾತ್ ನಿಧನದಿಂದ ದಲಿತ ಸಂಘಟನೆಗೆ ತುಂಬಲಾರದ ನಷ್ಟವಾಗಿದೆ ಎಂದರು.

ಇಲಾಖಾ ಸಲಹಾ ಸಮಿತಿಗೆ ಶಾಸಕರು

ಚಿಕ್ಕಮಗಳೂರು: ರಾಜ್ಯ ಸರ್ಕಾರವು ವಿವಿಧ ಇಲಾಖೆಗಳಿಗೆ ಶಾಸಕರ ಸಲಹಾ ಸಮಿತಿಗಳನ್ನು ರಚಿಸಿದ್ದು, ಶೃಂಗೇರಿ ಕ್ಷೇತ್ರದ ಶಾಸಕರಾದ ಹೆಚ್. ಜಿ. ಗೋವಿಂದಗೌಡ ಹಾಗೂ ಮೂಡಿಗೆರೆ ಶಾಸಕ ಪಿ. ತಿಪ್ಪಯ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಇಲಾಖೆಯ ಸಲಹಾ ಸಮಿತಿಗೆ ನೇಮಕವಾಗಿದ್ದಾರೆ.

ಕಲ್ಲುಗುಡ್ಡೆ ಗ್ರಾಮಕ್ಕೆ ಶಾಸಕರ ಭೇಟಿ

(ವರದಿ: ಬಿ. ಕೆ. ಲಕ್ಷ್ಮೀನಾರಾಯಣ)

ಕಲ್ಲುಗುಡ್ಡೆ: ಶಾಸಕ ಹೆಚ್. ಜಿ. ಗೋವಿಂದಗೌಡರು ಜೂನ್. ೨೭ ರಂದು ಈ ಗ್ರಾಮಕ್ಕೆ ಭೇಟಿ ಕೊಟ್ಟು, ನೇರಂಕಿ ಮತ್ತು ಮಂಜನ ಬಿಳಲು ಹರಿಜನ ಕಾಲೋನಿಗಳ ಪರಿಸ್ಥಿತಿಯನ್ನೂ, ಊರಿನ ಇತರ ಕೆಲವು ಸಮಸ್ಯೆಗಳನ್ನೂ ಪರಿಶೀಲಿಸಿದರು. ಅನಂತರ ನಡೆದ ಸಾರ್ವಜನಿಕ ಸಭೆಯಲ್ಲಿ ಊರಿನ ಹಲವು ಸಮಸ್ಯೆಗಳ ಬಗ್ಗೆ ಕ್ರಮ ತೆಗೆದುಕೊಳ್ಳುವ ಭರವಸೆ ಕೊಟ್ಟರು. ಜೆ. ಕೆ. ಶಿವಶಂಕರ ಸ್ವಾಗತಿಸಿ, ನಾಗಭೂಷಣ ವಂದಿಸಿದರು.

೫೦೦ ಅಡಿಕೆ ಮರ ಬಿರುಗಾಳಿಗೆ ಬಲಿ

(ವರದಿ: ಹೆಗ್ಗಾರು ಜಯಂತ್)

ಶಾನುವಳ್ಳಿ: ಇಲ್ಲಿಗೆ ಸಮೀಪದ ಕಾರಗದ್ದೆ ಗಣಪತಿಗೌಡ ಎಂಬವರ ತೋಟದಲ್ಲಿ ಜೂನ್ ೨೫ ರಂದು ಬೀಸಿದ ಬಿರುಗಾಳಿಗೆ ಸಿಕ್ಕಿ ಸುಮಾರು ೫೦೦ ಅಡಿಕೆ ಮರಗಳು ಬಿದ್ದಿವೆ. ತೋಟದ ಪಕ್ಕದಲ್ಲಿ ನೆರಳಿಗೆಂದು ಬೆಳೆಸಿದ್ದ ದೊಡ್ಡ ಮರಗಳು ಗದ್ದೆಯ ಕಡೆಗೆ ವಾಲಿಕೊಂಡಿದ್ದು ಅವುಗಳೂ ಸಹ ತೋಟದ ಮೇಲೆ ಉರುಳಿ ಬಿದ್ದಿವೆ. ಕಂದಾಯ ಇಲಾಖೆ ಅಧಿಕಾರಿಗಳು ಮಹಜರು ನಡೆಸಿದ್ದಾರೆಂದು ತಿಳಿದು ಬಂದಿದೆ.

ಶಿವಮೊಗ್ಗ ಆರ್.ಎಂ.ಸಿ.ಗೆ
ವೀರಪ್ಪಗೌಡ ಆಯ್ಕೆ

ಶೃಂಗೇರಿ: ಶಿವಮೊಗ್ಗ ವ್ಯವಸಾಯೋತ್ಪನ್ನಗಳ ಮಾರುಕಟ್ಟೆ ಸಮಿತಿಗೆ ಜೂನ್ ೨೬ ರಂದು ನಡೆದ ಚುನಾವಣೆಯಲ್ಲಿ, ಮೇಗುಂದಾ ಹೋಬಳಿಯೂ ಸೇರಿರುವ ಶೃಂಗೇರಿ ಕ್ಷೇತ್ರದಿಂದ ಮಾಜಿ ಶಾಸಕ ಕೆ. ಎನ್. ವೀರಪ್ಪಗೌಡರು ಆಯ್ಕೆಯಾಗಿದ್ದಾರೆ. ಅವರಿಗೆ ೧೧೪೮ ಮತಗಳೂ, ಅವರ ಪ್ರತಿಸ್ಪರ್ಧಿ ಬಾಳೆಮನೆ ಹಾಲಪ್ಪಗೌಡರಿಗೆ ೭೭೩ ಮತಗಳೂ ಬಂದಿದ್ದವು.

ಕೊರೆದು ತುಂಡಾದ ಕಾಲು ಸೇತುವೆಗೆ ರಿಪೇರಿಯಿಲ್ಲ

ಅಗಳಗಂಡಿ: ಇಲ್ಲಿಂದ ಹುಲಿಗರಡಿ ಗ್ರಾಮಕ್ಕೆ ಹೋಗುವ ದಾರಿಯಲ್ಲಿ ಗುಬ್ಬಗದ್ದೆ ಹಳ್ಳಕ್ಕೆ ೧೯-೮೨ ರಲ್ಲಿ ಕಟ್ಟಿಸಿದ್ದ ಕಾಲು ಸೇತುವೆ ಒಂದು ಬದಿ ಕೊರೆದು ತುಂಡಾಗಿದೆ. ಹಳ್ಳಿಗರು ತಾತ್ಕಾಲಿಕವಾಗಿ ಅದಕ್ಕೆ ಒಂದು ಸಂಕ ಜೋಡಿಸಿಕೊಂಡಿದ್ದರೂ ನೆರೆ ಬಂದಾಗ ಅದು ತೇಲಿಹೋಗಿ ಅನಂತರ ಜನರಿಗೂ ೨೫-೩೦ ಶಾಲಾ ಮಕ್ಕಳಿಗೂ ತೀವ್ರ ತೊಂದರೆಯಾಗುತ್ತದೆ. ರಿಪೇರಿಗಾಗಿ ಸಂಬಂಧಪಟ್ಟವರಿಗೆ ಮಾಡಿರುವ ಮನವಿಗಳು ಫಲ ನೀಡಿಲ್ಲ. ಸಂಬಂಧಿತರು ಕೂಡಲೇ ಗಮನ ಹರಿಸಿ ರಿಪೇರಿ ಮಾಡಿಸಬೇಕೆಂದು ಗ್ರಾಮಸ್ಥರು ಮನವಿ ಮಾಡಿದ್ದಾರೆ.

ಬೆಂಗಳೂರು ಅವರ ವಸಾಹತು ಆಗಿರುವಂತೆ
ಮೈಸೂರು ಬ್ಯಾಂಕು ಕನ್ನಡೇತರರ ಜಹಗೀರಿ?

ಕರ್ನಾಟಕದಲ್ಲಿಯೇ ಹುಟ್ಟಿಬೆಳೆದು ತನ್ನ ಕಾರ್ಯವ್ಯಾಪ್ತಿಯ ಶೇ. ೯೦ಕ್ಕೂ ಹೆಚ್ಚುಭಾಗವನ್ನು ಇಲ್ಲೇ ಹಬ್ಬಿಸಿಕೊಂಡಿರುವ ಸ್ಟೇಟ್‌ಬ್ಯಾಂಕ್ ಆಫ್ ಮೈಸೂರಿನಲ್ಲಿ ಕನ್ನಡಿಗರಲ್ಲದ ಅಧಿಕಾರಿಗಳೇ ತುಂಬಿರುವ ಕಾರಣ ಬ್ಯಾಂಕಿನಲ್ಲಿ ಕನ್ನಡಿಗರ ಸಂಖ್ಯೆ ದಿನೇ ದಿನೇ ಕ್ಷೀಣಿಸುತ್ತಿದೆ ಯೆಂದೂ, ಇಲ್ಲಿ ಕನ್ನಡ ಮತ್ತು ಕನ್ನಡಿಗರಿಗೆ ಕೆಟ್ಟ ರೀತಿಯಲ್ಲಿ ಅಪಮಾನ ಮತ್ತು ಕಿರುಕುಳ ಕೊಡಲಾಗುತ್ತಿದೆಯೆಂದೂ ಈಚೆಗೆ ದೊಡ್ಡ ಪ್ರತಿಭಟನೆ ಎದ್ದಿದೆ.

ಮೈಸೂರು ಬ್ಯಾಂಕಿನ ೪೨೦ ಶಾಖೆಗಳಲ್ಲಿ ೩೭೦ ಕರ್ನಾಟಕದಲ್ಲಿಯೇ ಇವೆ, ಅದರಲ್ಲಿ ಸುಮಾರು ೨೦೦ ಗ್ರಾಮೀಣ ಪ್ರದೇಶದಲ್ಲಿವೆ. ಆದರೆ ೧೯೬೦ರಿಂದ ಈ ಬ್ಯಾಂಕಿನ ಮ್ಯಾನೇಜಿಂಗ್ ಡೈರೆಕ್ಟರುಗಳೆಲ್ಲ ಕನ್ನಡೇತರರು. ಇವರ ಕೈಕೆಳಗಿನ ಇಬ್ಬರು ಜನರಲ್ ಮ್ಯಾನೇಜರ್‌ಗಳು, ಎಂಟರಲ್ಲಿ ನಾಲ್ಕು ಮಂದಿ ಸ||ಜ|| ಮ್ಯಾನೇಜರುಗಳು —ಎಲ್ಲ ಕನ್ನಡೇತರರೇ. ಈ ಪಟ್ಟಿ ಹೀಗೇ ಗುಮಾಸ್ತರ ತನಕವೂ ಬೆಳೆಯುತ್ತದೆ. ಈ ವರ್ಷ ನೇಮಕ ಮಾಡಿಕೊಳ್ಳುತ್ತಿರುವ ಸುಮಾರು ೮೦೦ ಗುಮಾಸ್ತರ ಪೈಕಿ ೬೦೦ಕ್ಕೂ ಹೆಚ್ಚು ಜನ ಕನ್ನಡೇತರರೆಂದು ಒಂದು ಅಂದಾಜು.

ಸ್ಟೇಟ್ ಬ್ಯಾಂಕ್ ಸಮೂಹದ ಸಿಬ್ಬಂದಿ ನೇಮಕಾತಿ ಮಂಡಳಿ (ದ.ಭಾರತ ಶಾಖೆ) ಮದ್ರಾಸಿನಲ್ಲಿ ಹಾಗೂ ಅಧಿಕಾರಿಗಳ ನೇಮಕಾತಿ ಮಂಡಳಿ ಮುಂಬೈಯಲ್ಲಿರುವುದು ಈ ಪಾಳೆಯಗಾರಿ ತಾರತಮ್ಯಕ್ಕೆ ಕಾರಣವಾಗಿದೆ. ಇದರ ಪರಿಣಾಮವಾಗಿ, ಮುಖ್ಯವಾಗಿ ಅಪ್ಪಟ ಕನ್ನಡ ಗ್ರಾಮೀಣ ಪ್ರದೇಶದಲ್ಲೂ ಸಹ ಕೇವಲ ಸಿಬ್ಬಂದಿಯಲ್ಲಿ ಹೆಚ್ಚಿನವರು ತಮಿಳರೆಂಬ ಕಾರಣಕ್ಕೆ ಬೋರ್ಡುಗಳನ್ನೂ ತಮಿಳಿನಲ್ಲಿ ಬರೆಸುವುದು, ಕನ್ನಡಿಗರಿಗೆ ಅವಹೇಳನ ಮಾಡುವುದನ್ನು ಪ್ರತಿಭಟಿಸುವ ಕನ್ನಡಿಗ ಗ್ರಾಹಕರಿಗೆ —"ಬೇಕಾದರೆ ನಿಮ್ಮ ಖಾತೆಗಳನ್ನು ಮುಚ್ಚಿಸಿಕೊಂಡು ಹೋಗ್ರಿ" ಎಂದು ತಮಿಳು ಅಥವಾ ಇಂಗ್ಲಿಷಿನಲ್ಲಿ ಅಬ್ಬರಿಸುವುದು ಮುಂತಾದ ಪ್ರಕರಣಗಳು ಪದೇ ಪದೇ ವರದಿಯಾಗುತ್ತಿವೆ.

ಈ ಎಲ್ಲ ಅನ್ಯಾಯಗಳನ್ನು ಪ್ರತಿಭಟಿಸಿ, ಬ್ಯಾಂಕಿಂಗ್ ಉದ್ಯಮ, ಗ್ರಾಹಕರು ಹಾಗೂ ಕನ್ನಡಿಗರಿಗೆ ನ್ಯಾಯ ಸಿಕ್ಕುವಂತೆ ಮಾಡಲು ಬ್ಯಾಂಕಿನ ಸಿಬ್ಬಂದಿ ಕನ್ನಡ ಬಳಗವೊಂದನ್ನು ಸ್ಥಾಪಿಸಿಕೊಂಡಿದ್ದಾರೆ. ●

(೨ನೇ ಪುಟಕ್ಕೆ)

ಓದುಗರ ಪತ್ರ

ಶಾಸಕರಿಗೊಂದು 'ಜ್ಞಾಪಕ ಪತ್ರ'

ಸಂಪಾದಕರಲ್ಲಿ,

ಸ್ವಾಮಿ,

ಕಳೆದ ತಿಂಗಳಲ್ಲಿ ನಿಮ್ಮ ಪತ್ರಿಕೆಯಲ್ಲಿ, ಶಾಸಕ ಹೆಚ್. ಜಿ. ಗೋವಿಂದೇಗೌಡರ ಪಾದಯಾತ್ರೆಯ ವಿಷಯವಾಗಿ ನೋಡಿದ್ದೇನೆ. ಆದರೆ ಶಾಸಕರು ನಮ್ಮ ಕುಗ್ರಾಮವಾದ ಹುಲಿಗರಡಿಯನ್ನು ಮರೆತಂತಿದೆ. ಏಕೆಂದರೆ ಅವರು ಆಯ್ಕೆಯಾದಾಗ "ನಾನು ಎಲ್ಲಾ ಮತಗಟ್ಟೆಗೂ ಭೇಟಿ ಕೊಡುವೆನೆಂದು ತಿಳಿಸಿದವರು ಮತದಾರರನ್ನು ೨ ದಿನ ಕಾಯಿಸಿ ಬರಲಿಲ್ಲ. ತಮ್ಮ ಪಾದಯಾತ್ರೆಯಲ್ಲಾದರೂ ಬರಬಹುದೆಂದು ಗ್ರಾಮಸ್ಥರು ನಿರೀಕ್ಷಿಸಿದ್ದರು. ಆದರೆ ಈಗಲೂ ಅವರ ಸುಳಿವಿಲ್ಲ.

—ಲಕ್ಷ್ಮೀನಾರಾಯಣ, ಹುಲಿಗರಡಿ.

ಬಿದ್ರಗೋಡು ರಾಮ ಮಂದಿರದಲ್ಲಿ ಕಳವು

(ನಮ್ಮ ಪ್ರತಿನಿಧಿಯಿಂದ)

ಬಿದರಗೋಡು: ಇಲ್ಲಿನ ಶ್ರೀರಾಮ ಮಂದಿರದಲ್ಲಿ ಜೂನ್ ೧೪ರ ರಾತ್ರಿ ಕಾಣಿಕೆ ಡಬ್ಬಿ ಮತ್ತು ತ್ಯಾಳಿಗಳು ಸೇರಿದಂತೆ ಸುಮಾರು ೧,೦೦೦ ರೂ. ಬೆಲೆಯ ವಸ್ತುಗಳು ಕಳುವಾಗಿದ್ದು, ಆಗುಂಬೆ ಪೋಲೀಸರಿಗೆ ದೂರು ಕೊಟ್ಟಿರುವುದಾಗಿ ರಾಮ ಸೇವಾ ಸಮಿತಿಯ ಕಾರ್ಯದರ್ಶಿ ಜಿ.ಆರ್. ನಾಗೇಶ ಪೈ ತಿಳಿಸಿದ್ದಾರೆ.

ಬಡ್ಡಿ — ಬವಣೆ

ಆತ ತನ್ನ ಸಾಲದ ಅಸಲು ಪೂರ್ತಿ ೫ ಸಾವಿರ ರೂ. ಹೇಗೋ ಮಾಡಿ ಕಟ್ಟಿದ್ದರು. ಬಡ್ಡಿ ರಿಯಾಯ್ತಿ ಆಗುತ್ತೆ ಅಂದುಕೊಂಡಿದ್ದರು. ಆದರೆ ಶೇ. ೭ ರಂತೆ ಬಡ್ಡಿಯನ್ನೂ ಕಟ್ಟಿದರೆ ಮಾತ್ರ ಉಳಿದ ಶೇ. ೭ ರಿಯಾಯ್ತಿ, ಇಲ್ಲದಿದ್ದರೆ ಅಷ್ಟೂ ಹಣಕ್ಕೆ ಶೇ. ೧೪ರ ಬಡ್ಡಿ ಬೀಳುತ್ತೆ ಎಂದು ತಿಳಿದಾಗ ಅವರಿಗೆ ನಂಬಲಾಗಲಿಲ್ಲ.

ಇದು ಚಾಲ್ತಿ ಸಾಲಗಾರರಾದ ಬಡ ರೈತರೊಬ್ಬರ ಕತೆ.

ಜಯಪುರದ ವ್ಯವಸಾಯ ಸೇವಾ ಸಹಕಾರ ಸಂಘದಿಂದ ಶ್ರೀಕಂಠಯ್ಯ ಚಾಲ್ತಿ ಸಾಲಿನಲ್ಲಿ ೫ ಸಾವಿರ ರೂ. ಸಾಲ ಪಡೆದಿದ್ದರು. ಮಾರ್ಚಿಯೊಳಗೆ ಹಣ ಕಟ್ಟಬೇಕೆಂದು ಅವರಿಗೆ ನೋಟೀಸು ಬಂದಿತ್ತು. ಆದರೆ ಈ ವರ್ಷದ ದುರ್ಭರ ಸನ್ನಿವೇಶದಲ್ಲಿ ಎಷ್ಟು ಹೆಣಗಿದರೂ ಅವರಿಂದ ಪೂರ್ತಿ ಹಣ ಹೊಂದಿಸಲು ಆಗಲಿಲ್ಲ. ಇನ್ನೇನು, ಜಪ್ತಿಯಾಗುತ್ತದೆ; ಆದರೆ ಆಗಲಿ. ಬೇರೆ ಏನು ಮಾಡಲೂ ಸಾಧ್ಯವಿಲ್ಲ–ಎಂದು ಹತಾಶೆಯಿಂದ ಎಲ್ಲ ಆಸೆ ಕೈಬಿಟ್ಟಿದ್ದರು ಶ್ರೀಕಂಠಯ್ಯ.

ಆದರೆ ಅಷ್ಟರಲ್ಲಿ ಸರ್ಕಾರದ ಸಾಲ ಮನ್ನಾ ಘೋಷಣೆಯಾಯ್ತು: ಜೂನ್ ೩೦ ರೊಳಗೆ ಚುಕ್ತ ಮಾಡುವ ಸುಸ್ತಿದಾರರಿಗೆ ಪೂರ್ತಿ ಬಡ್ಡಿ ಮಾಫಿ! ತಾವು ಸುಸ್ತಿದಾರರೇ ಅಂದುಕೊಂಡರು ಶ್ರೀಕಂಠಯ್ಯ. ಆದರೆ ಅರ್ಥ ಹಾಗಲ್ಲ, ಚಾಲ್ತಿ ಸಾಲಕ್ಕೆ ಪೂರ್ತಿ ಬಡ್ಡಿ ಮಾಫಿ ಇಲ್ಲ ಎಂದು ಕಾರ್ಯದರ್ಶಿಗಳು ವಿವರಿಸಿದ್ದು ಅವರಿಗೆ ಮನಸ್ಸಿಗೆ ಹೋಗಲಿಲ್ಲ, ಅಥವಾ ನಂಬಿಕೆಯಾಗಲಿಲ್ಲ.

ಜೂನ್ ೨೫ಕ್ಕೆ ಹೇಗೋ ಮಾಡಿ, ಬಾಕಿ ಉಳಿದಿದ್ದ ೩ ಸಾವಿರ ತಂದು ಕೊಟ್ಟು "ರಶೀದಿ ಹಾಕಿ" ಎಂದರು. "ಇನ್ನೂ ೩೫೦ ರೂ ಕಟ್ಟಿಬಿಡಿ. ಇಲ್ಲವಾದರೆ ಜೂನ್ ೩೦ರ ನಂತರ ನಿಮಗೆ ಇನ್ನೂ ನಾನ್ನೂರು ರೂ. ಗೆ ಮೇಲ್ಪಟ್ಟು ನಷ್ಟ" ಎಂದು ಕಾರ್ಯದರ್ಶಿಗಳು ಪುನಃ ವಿವರಿಸಿದಾಗ ಶ್ರೀಕಂಠಯ್ಯನವರಿಗೆ ತಲೆಸುತ್ತು ಬಂದಂಥ ಅನುಭವ.

"ಇನ್ನು ೩೫೦ ಅಲ್ಲ, ಮೂರು ರೂ. ಬೇಕೆಂದರೂ ಯಾರೂ ಕೊಡುವವರಿಲ್ಲ. ಈ ಮೂರು ಸಾವಿರ ತರಬೇಕಾದರೆ ಪಟ್ಟ ಪಾಡು ಗೊತ್ತಾ? ಶಿವಮೊಗ್ಗಕ್ಕೆ ಹೋಗಿ ಮಂಡಿಯಲ್ಲಿ ೨ ದಿನ ಕೂತು 'ಕುಂಯೊ ಮರ್ರೋ' ಎಂದು, ಕಾಡಿ ಬೇಡಿ ಇಷ್ಟು ತರಬೇಕಾದರೆ ಮಾನ ಹಾಗಿರಲಿ, ಪ್ರಾಣವೇ ಹೋಯಿತು. ಇನ್ನೂ ೩೫೦ ತಾ ಎಂದರೆ ಆಗು ಹೋಗುವ ಮಾತೇ ಸ್ವಾಮಿ?" ಎಂದು ಅವರು ಹೇಳುತ್ತಿದ್ದಾಗ, ತಾವು ಇಷ್ಟು ಮಾಡಿಯೂ ಪ್ರಯೋಜನ ಇಲ್ಲವಾಯಿತಲ್ಲ ಎಂದು ಅವರಲ್ಲಿ ಮೂಡಿದ್ದ ಹತಾಶೆ ಕರುಳು ಮಿಡಿಸುವಂತಿತ್ತು; ಕಡೇ ಘಳಿಗೆಯವರೆಗೂ ಹೋರಾಡಿದರೂ ಸೋತು ಹೋದವನ ಹಾಗೆ ವಿಷಾದ ಎದ್ದು ಕಾಣುತ್ತಿತ್ತು

ಇಂಥ ನಿರ್ಭಾಗ್ಯರು ಎಷ್ಟು ಮಂದಿಯೋ!' ಎಂದು ಭಾರವಾದ ಮನಸ್ಸಿನಿಂದ ಅಲ್ಲಿಂದ ಹೊರ ಬಂದೆ. —'ಪತ್ರಕರ್ತ'

ಮಾಜಿ ಯೋಧರ ಸಂಘಕ್ಕೆ ಸದಸ್ಯರಾಗಲು ಕರೆ

ಚಿಕ್ಕಮಗಳೂರು: ಜಿಲ್ಲೆಯ ಮಾಜಿ ಯೋಧರ ಸಂಘಕ್ಕೆ ಸದಸ್ಯರಾಗುವಂತೆ ಸಂಘದ ಅಧ್ಯಕ್ಷ ಕ್ಯಾಪ್ಟನ್ ಎಂ.ಎ. ಜಗದೀಶ್ ಅವರು ಮಾಜಿಯೋಧರು, ಯುದ್ಧದಲ್ಲಿ ಮಡಿದವರ ಪತ್ನಿಯರುರು ಹಾಗೂ ಅಂಗವಿಕಲರಾದವರಿಗೆ ಕರೆನೀಡಿದ್ದಾರೆ. ಸದಸ್ಯತ್ವ ಶುಲ್ಕ ೧೦ ರೂ, ಇದ್ದು, ಸಂಘದ ವಿಳಾಸ: ರತ್ನಗಿರಿರಸ್ತೆ, ವಸಂತ ವಿಹಾರ್, ಚಿಕ್ಕಮಗಳೂರು.

ತರುಣ ರೈತಸಂಘದಿಂದ ಕಾಲು ಸೇತುವೆ ನಿರ್ಮಾಣ

ಗುಡ್ಡೇತೋಟ: ಇಲ್ಲಿನ ಶ್ರೀ ಗಣೇಶ ತರುಣ ರೈತ ಸಂಘದವರು ಅರಳಿಕಟ್ಟೆ ಮತ್ತು ಗುಡ್ಡೇತೋಟ ನಡುವೆ ಪಂಚಾಯ್ತಿ ಕಾಮಗಾರಿಯಾದ ಕಾಲು ಸೇತುವೆಯನ್ನು ಈಚೆಗೆ ನಿರ್ಮಿಸಿದರು. ಇದರಿಂದ ಬರುವ ಹಣವನ್ನು ಸಂಘದ ಆರ್ಥಿಕ ಅಭಿವೃದ್ಧಿಗೆ ಬಳಸಿಕೊಳ್ಳಲಾಗುವುದೆಂದು ಸಂಘದ ಅಧ್ಯಕ್ಷ ಎಂ. ವಿ. ಗಂಗಾಧರ್ ತಿಳಿಸಿದ್ದಾರೆ.

'ಮುಂಜಾವು'

ಚಂದಾದರ: ವಾರ್ಷಿಕ ಚಂದಾ ೨೦ರೂ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ:
ಸಿರಿಮನೆ ನಾಗರಾಜ್.
ಅಚ್ಚು: ದೀವಟಿಗೆ ಅಚ್ಚುಕೂಟ, ಕೊಪ್ಪ

ಮೈಸೂರು ಬ್ಯಾಂಕು ಕನ್ನಡೇತರರ ಜಹಗೀರಿ?

(೧ನೇ ಪುಟದಿಂದ)

ಬಳಗ ೫ ಪ್ರಮುಖ ಬೇಡಿಕೆಗಳನ್ನು ಮುಂದಿಟ್ಟು ನಡೆಸಿದ ಮಾತುಕತೆ, ಅಭಿಪ್ರಾಯ-ಬೆಂಬಲ ಸಂಗ್ರಹಣೆ, ಪ್ರತಿಭಟನೆ ಮುಂತಾದ ಯಾವ ಮಾರ್ಗಗಳೂ ಆಡಳಿತ ವರ್ಗಕ್ಕೆ ಬುದ್ಧಿ ಸರಿ ಮಾಡಿಲ್ಲದ್ದರಿಂದ ಈಗ ಉಗ್ರ ಹೋರಾಟ ಅನಿವಾರ್ಯವಾಗಿದೆಯೆಂದು ಬಳಗದ ಕಾರ್ಯದರ್ಶಿ, ಕೊಪ್ಪದವರೇ ಆದ ಸು. ಶೃಂಗೇಶ್ವರ ಶರ್ಮ ತಿಳಿಸಿದ್ದಾರೆ.

ಈ ಮಧ್ಯೆ, ಜೂನ್ ೧೮ ರಂದು ಬೆಂಗಳೂರಲ್ಲಿ ವಿಜಯಾ ಬ್ಯಾಂಕ್ ನೌಕರರ ಅಧಿವೇಶನದಲ್ಲಿ ಮಾತಾಡುತ್ತ ಯುವಜನ ಖಾತೆ ರಾಜ್ಯ ಸಚಿವ ಜೀವರಾಜ ಆಳ್ವ ಅವರು, "ಬ್ಯಾಂಕಿಂಗ್ ನೇಮಕ ಮಂಡಳಿಯಲ್ಲಿ ಸ್ಥಳೀಯರಿಗೆ ಹೆಚ್ಚಿನ ಅವಕಾಶ ಕಲ್ಪಿಸುವಂತೆ ಕೇಂದ್ರವು ತನ್ನ ನೀತಿಯನ್ನು ಬದಲಿಸಿಕೊಳ್ಳದಿದ್ದರೆ ಈ ಸಮಸ್ಯೆಯಲ್ಲಿ ರಾಜ್ಯವು ಮಧ್ಯೆ ಪ್ರವೇಶಿಸಬೇಕಾದೀತು" ಎಂದು ಎಚ್ಚರಿಸಿದ್ದಾರೆ.

ಎಲ್ಲಿ ಹೋದರೂ ತಾವೇ "ಶ್ರೇಷ್ಠರು, ಅತಿ ಬುದ್ಧಿವಂತರು" ಎಂದು ಹೀನವಾಗಿ ವರ್ತಿಸುವ ಈ ಹುಂಬರಿಗೆ–ಮುಖ್ಯವಾಗಿ ತಮಿಳರಿಗೆ–ಸ್ವಲ್ಪ ಬುದ್ಧಿವಾದ ಹೇಳಬಲ್ಲ ಸಂಭಾವಿತರು ಅವರಲ್ಲೇ ಹುಟ್ಟಿ ಬರಬೇಕಾಗಿದೆ. ಇಲ್ಲವಾದರೆ ಇವರು ಸುಮ್ಮನೆ ಅಶಾಂತಿ ಹಬ್ಬಿಸುತ್ತ ಜನಾಂಗದ್ವೇಷದ ಬೆಂಕಿ ಹತ್ತಿಸುತ್ತ ಹೋಗುತ್ತಾರೆ.

ಪಿಯುಸಿ: ಬಾಳೆಹೊನ್ನೂರು ಕಾಲೇಜಿಗೆ ಶೇ. ೮೬.೭

ಬಾಳೆಹೊನ್ನೂರು: ಇಲ್ಲಿನ ಜಗದ್ಗುರು ರೇಣುಕಾಚಾರ್ಯ ಸಂಯುಕ್ತ ಕಿರಿಯ ಕಾಲೇಜಿಗೆ ಪಿಯುಸಿಯಲ್ಲಿ ಶೇ. ೮೬.೭ ಫಲಿತಾಂಶ ಬಂದಿದೆ. ಪರೀಕ್ಷೆಗೆ ಕೂತಿದ್ದ ೧೫೫ ಮಂದಿಯಲ್ಲಿ ೧೩೩ ಮಂದಿ ತೇರ್ಗಡೆಯಾಗಿದ್ದು ೫ ಜನ ಪ್ರಥಮ ಶ್ರೇಣಿ ಪಡೆದಿದ್ದಾರೆ. ಈ ಕಾಲೇಜು ಕಳೆದ ವರ್ಷವೂ ಸಹ ಶೇ. ೮೬.೭ ಫಲಿತಾಂಶ ಪಡೆದಿತ್ತು.

ಎಸ್.ಎಸ್.ಎಲ್.ಸಿ

ಇದೇ ಕಾಲೇಜಿನಲ್ಲಿ ಎಸ್ಸೆಸ್ಸೆಲ್ಸಿಯಲ್ಲಿ ೧೧೨ ಜನ ವಿದ್ಯಾರ್ಥಿಗಳಲ್ಲಿ ೬೮ ಜನ ಉತ್ತೀರ್ಣರಾಗಿದ್ದಾರೆ. ಫಲಿತಾಂಶ ಶೇ. ೬೧. ಪ್ರಥಮ ಶ್ರೇಣಿ ೫.
